ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406
ಮೈಸೂರು-570 005

---

ವಿಷಯ: 2024-25ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಜೀನಿಯಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪ್ರಾರಂಭಿಸಲಿರುವ BCA ಕೋರ್ಸಿಗೆ ಸಂಯೋಜನೆ ನೀಡುವ ಬಗೆಗೆ.

ಉಲ್ಲೇಖ: 1) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ: 31.05.2024
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 11.06.2024
3) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ 12.06.2024
4) ಸರ್ಕಾರಕ್ಕೆ ಕಳುಹಿಸಿರುವ ಪ್ರಸ್ತಾವನೆ ದಿನಾಂಕ 21.06.2024
5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ ಇಡಿ 74 ಯುಎಂವಿ 2024 ದಿನಾಂಕ 03.10.2024

* * * * *

## ಹೊಸ ಮಾನ್ಯತೆ ಸಂಯೋಜನಾ ಮಂಜೂರಾತಿ ಆದೇಶ ಸಂಖ್ಯೆ ಸಿಡಿಸಿ-3/69/2024-25 ದಿನಾಂಕ 16.10.2024

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59 (11)ರ ಮೇರೆಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಇವರ ಉಲ್ಲೇಖ 05 ರನ್ವಯ 2024-25ನೇ ಶೈಕ್ಷಣಿಕ ಸಾಲಿನಿಂದ **BCA** ಕೋರ್ಸನ್ನು ಹೊಸದಾಗಿ ಪ್ರಾರಂಭಿಸಲು **ಮೈಸೂರಿನ ಜೀನಿಯಸ್ ಪ್ರಥಮ ದರ್ಜೆ ಕಾಲೇಜಿಗೆ ಹೊಸ ಮಾನ್ಯತೆ ಸಂಯೋಜನಾ ಮಂಜೂರಾತಿ** ಆದೇಶ ನೀಡಲಾಗಿದೆ.

| ಕೋರ್ಸುಗಳು | ಭಾಷೆಗಳು | ಐಚ್ಛಿಕಗಳು | ವಿಭಾಗ | ವಿದ್ಯಾರ್ಥಿ ಪ್ರಮಾಣ |
|---|---|---|---|---|
| B.C.A | ಕನ್ನಡ, ಸಂಸ್ಕೃತ, ಇಂಗ್ಲೀಷ್, ಹಿಂದಿ | ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ | 01 | 60 |

ವಿಶ್ವವಿದ್ಯಾನಿಲಯದ ಸ್ಥಳೀಯ ತನಿಖಾ ಸಮಿತಿ ಹಾಗೂ ಸರ್ಕಾರದ ಷರತ್ತುಗಳನ್ನು ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ **ಅನುಪಾಲನಾ ವರದಿಯನ್ನು ಸಮರ್ಪಕ ದಾಖಲಾತಿಗಳೊಡನೆ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ** ತಲುಪಿಸುವುದು. ಪರೀಕ್ಷಾ ನಿಯಮ/ ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳು:**

- Efforts should be made to improve results.
- Admissions to the B.Com and B.BA. courses should be improved.
- Qualified faculty should be appointed for B.Com. and B.BA courses.

**ಸರ್ಕಾರ ವಿಧಿಸಿರುವ ಷರತ್ತುಗಳು:**

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಕಾಲೇಜಿನ ಮೇಲ್ಕಂಡ ಕಾಲೇಜಿನ ಮೇಲ್ಕಂಡ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅವುಗಳನ್ನು ಶಾಶ್ವತ ಅನುದಾನರಹಿತ ಕೋರ್ಸುಗಳು ಎಂದು ಪರಿಗಣಿಸತಕ್ಕದ್ದು.
2. ಮೇಲ್ಕಂಡ ಕಾಲೇಜು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

ಮು.ತಿನೋ..

New course

3. ನಿಗಧಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;
4. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
5. **ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪೂರೈಸತಕ್ಕದ್ದು.**
6. ಕಾಲೇಜು/ಆಡಳಿತ ಮಂಡಳಿಯು ಶೇ.50ರಷ್ಟು ವಿಶ್ವವಿದ್ಯಾನಿಲಯ ಕೋಟಾವನ್ನು(ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾನಿಲಯದ ನಿಯಮಾವಳಿಯ ಪ್ರಕಾರ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕ /ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
7. ದಿನಾಂಕ 13.8.1997ರಂದು ವಿಶಾಖ V/s ರಾಜಸ್ತಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಅದು ಸಂಜ್ಞೇಯ ಅಪರಾಧ (cognizable offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸತಕ್ಕದ್ದು; ಮುಂದುವರೆದು ಸಮಿತಿಯನ್ನು ರಚಿಸಿ, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು;
8. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ / ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.
9. ಕಾಲೇಜಿನ ಆಡಳಿತ ಮಂಡಳಿಯು ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯ ಅನುಮೋದಿಸುವವರೆಗೆ ಅಥವಾ 6 ತಿಂಗಳ ಅವಧಿಗೆ ಮೀರಿ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ;
10. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಭೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ;
11. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
12. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
13. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್‌ಇ 2020, ದಿನಾಂಕ 18.02.2022ರನ್ವಯ ಅಗತ್ಯ ಜಮೀನನ್ನು ಕಾಲೇಜು ಹೆಸರು ಅಥವಾ ಸಂಸ್ಥೆಯ ಹೆಸರಿಗೆ 06 ತಿಂಗಳೊಳಗಾಗಿ ಹೊಂದತಕ್ಕದ್ದು.
14. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ 59ರಲ್ಲಿನ ಮಾನದಂಡಗಳು ಹಾಗೂ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ನು ಸಂಬಂಧಿಸಿದ ಕಾಲೇಜು ಪಾಲಿಸಿವೆಯೇ ಎಂಬುದರ ಕುರಿತಾಗಿ ವಿಶ್ವವಿದ್ಯಾನಿಲಯವು ಖಚಿತಪಡಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ವಿಶ್ವವಿದ್ಯಾನಿಲಯವು ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
15. ಸರ್ಕಾರದ ಸುತ್ತೋಲೆ ಸಂಖ್ಯೆ: 29 ಯುಎನ್‌ಇ 2021, ದಿನಾಂಕ 12.02.2021ರಲ್ಲಿ ತಿಳಿಸಿರುವ ಎಲ್ಲಾ ನಿಯತಾಂಕಗಳನ್ನು 06 ತಿಂಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.
16. ಈ ಮೇಲ್ಕಂಡ ಷರತ್ತುಗಳನ್ನು ಸಂಬಂಧಪಟ್ಟ ಕಾಲೇಜು ಪೂರೈಸುವುದನ್ನು ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಪೂರೈಸದಿದ್ದಲ್ಲಿ, ಈ ಆದೇಶವು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

Cont..

ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು ಕಾರ್ಯಗತ ಮಾಡಲು ಕಾರ್ಯಪ್ರವೃತ್ತರಾಗುವುದು ಹಾಗೂ ಈ ಸಂಬಂಧ **ಅಗತ್ಯ ದಾಖಲೆಗಳೊಡನೆ ಅನುಪಾಲನಾ** ವರದಿಯನ್ನು ಈ ಪತ್ರ ತಲುಪಿದ ಕೂಡಲೇ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ಕಳುಹಿಸಲು ಕೋರಿದೆ. ಪರೀಕ್ಷಾ ನಿಯಮ/ ಪ್ರವೇಶಾತಿ / ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

28/10/2024

ಕುಲಸಚಿವರು

ಗೆ,

ಪ್ರಾಂಶುಪಾಲರು
ಜೀನಿಯಸ್ ಪ್ರಥಮ ದರ್ಜೆ ಕಾಲೇಜು,
ಕೆ.ಬಿ.ಎಲ್ ಬಡಾವಣೆ ಆಲನಹಳ್ಳಿ,
ಮೈಸೂರು 570028

ಪ್ರತಿಗಳು:

1) ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು-560 001.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
4) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಜೆ.ಎಲ್.ಬಿ.ರಸ್ತೆ, ಮೈಸೂರು.
5) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6) ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7) ಉಪಕುಲಸಚಿವರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8) ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

New course

ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301
ಇ–ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು–570 005

ವಿಷಯ: 2024–25ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸುವ ಬಗೆಗೆ.

ಉಲ್ಲೇಖ: 1) ಸ್ಥಳೀಯ ವಿಚಾರಣಾ ಸಮಿತಿ ಭೇಟಿ ನೀಡಿದ ದಿನಾಂಕ 31.05.2024
2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 11.06.2024
3) ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕ 12.06.2024

* * * * *

<u>ಸಂಯೋಜನೆ ಮುಂದುವರಿಕೆ ಮಂಜೂರಾತಿ ಆದೇಶ ಸಂಖ್ಯೆ ಸಿಡಿಸಿ–3/69/2024–25 ದಿನಾಂಕ 10.07.2024</u>

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59 (17)ರ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಸೂಚಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು ಅವುಗಳನ್ನು ಕಾರ್ಯಗತಗೊಳಿಸುವಂತೆ ಸೂಚಿಸಿ ಕೆಳಕಂಡ ಕಾಲೇಜಿಗೆ ಪಟ್ಟಿಯಲ್ಲಿ ಸೂಚಿಸಿರುವ ಕೋರ್ಸ್/ವಿಷಯಗಳಿಗೆ 2024–25ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪ್ರಾಧಿಕಾರಗಳ ಅನುಮೋದನೆಯನ್ವಯ ತಾತ್ಕಾಲಿಕ ಸಂಯೋಜನಾ ಮುಂದುವರಿಕೆ ಮಂಜೂರಾತಿ ಆದೇಶ ನೀಡಲಾಗಿದೆ.

## ಕಾಲೇಜಿನ ಹೆಸರು : ಜೀನಿಯಸ್ ಪ್ರಥಮ ದರ್ಜೆ ಕಾಲೇಜು, ಮೈಸೂರು

ಮುಂದುವರಿಕೆ ಸಂಯೋಜನೆ:

| ಶಿಕ್ಷಣ | ಭಾಷೆಗಳು | ಐಚ್ಛಿಕಗಳು | ವಿಷಯ ಸಮೂಹ | ವಿಭಾಗ | ಒಟ್ಟು ಪ್ರವೇಶ ಮಿತಿ |
|---|---|---|---|---|---|
| ಬಿ.ಕಾಂ. | ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ | ವಿಶ್ವವಿದ್ಯಾನಿಲಯದ ನಿಯಮದಂತೆ | - | 01 | 60 |
| ಬಿ.ಬಿ.ಎ | | ವಿಶ್ವವಿದ್ಯಾನಿಲಯದ ನಿಯಮದಂತೆ | | 01 | 60 |

<u>ವಿ.ಸೂ. :</u>

1. ಸಂಯೋಜನಾ ಮಂಜೂರಾತಿ ಆದೇಶದಲ್ಲಿ ನೀಡಿರುವ ಕೋರ್ಸ್/ವಿಷಯ/ವಿಷಯಸಮೂಹಗಳಿಗೆ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯೆಗೆ ಮಾತ್ರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ಸಂಯೋಜನಾ ಮಂಜೂರಾತಿ ಆದೇಶ ನೀಡದೇ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಹೊಸದಾಗಿ ಶಿಫಾರಸ್ಸು ಮಾಡದಿರುವ ಕೋರ್ಸ್/ವಿಷಯ/ವಿಷಯ ಸಮೂಹಗಳನ್ನು/ಪ್ರವೇಶಾತಿ ಸಂಖ್ಯೆಯನ್ನು ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ.

2. ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯಲ್ಲಿ ಶಿಫಾರಸ್ಸು ಮಾಡಿದ್ದರೂ/ಸರ್ಕಾರದ ಅನುಮೋದನೆ ದೊರೆತಿದ್ದರೂ ವಿಶ್ವವಿದ್ಯಾನಿಲಯದ ಸಂಯೋಜನಾ ಮಂಜೂರಾತಿ ಆದೇಶ ಪಡೆಯದೇ ಯಾವುದೇ ಕೋರ್ಸ್/ ವಿಷಯ/ ವಿಷಯಸಮೂಹ/ ಪ್ರವೇಶಾತಿ ಸಂಖ್ಯೆಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಅಂತಹ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಅಂಶವನ್ನು ಗಮನಿಸತಕ್ಕದ್ದು.

ಮ.ತಿ.ನೋ.

<u>ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಷರತ್ತುಗಳು:</u>

- Efforts should be made to improve results.
- Admissions to the B.Com. and B.BA. courses should be improved.
- Qualified faculty should be appointed for B.Com. and B.BA. courses.

ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು. ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಷರತ್ತುಗಳನ್ನು 2024-25ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಮುನ್ನ ತಪ್ಪದೇ ಪಾಲಿಸುವುದು ಮತ್ತು ಇದರ ಸಂಬಂಧ **ಅಗತ್ಯ ದಾಖಲೆಗಳೊಡನೆ ಸಮರ್ಪಕ ಅನುಪಾಲನಾ ವರದಿಯನ್ನು** ಒಂದು ತಿಂಗಳೊಳಗಾಗಿ ಕಾಲೇಜು ಅಭಿವೃದ್ಧಿ ಮಂಡಳಿ ಕಛೇರಿಗೆ ತಲುಪಿಸುವುದು. ಪರೀಕ್ಷಾ ನಿಯಮ/ ಪ್ರವೇಶಾತಿ ಮತ್ತು ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕುಲಸಚಿವರು

**ಕುಲಸಚಿವ**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು**

ಗೆ,

ಪ್ರಾಂಶುಪಾಲರು,
ಜೀನಿಯಸ್ ಪ್ರಥಮ ದರ್ಜೆ ಕಾಲೇಜು,
ಕೆ.ಬಿ.ಎಲ್.ಬಡಾವಣೆ, ಆಲನಹಳ್ಳಿ,
ಮೈಸೂರು-570028

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು-560 001.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
4. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಹುಣಸೂರು ರಸ್ತೆ, ಮೈಸೂರು.
5. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಉಪಕುಲಸಚಿವರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ